ಚಡಪಡಿಕೆಯನ್ನು ನೋಡಲಿಕ್ಕಾಗದೆಯೆ, ನಾನು ಕಿಸೆಯೊಳಗಿಂದ ಮೊಬೈಲೆಳೆದು ತೆರೆದು– ‘ಒಂದರ್ಧ ಗಂಟೆ ತಡವಾಗುತ್ತೆ. ಕ್ಯಾಂಪಸಿನಲ್ಲೇ ಇದೀನಿ. ಬರುತೀನಿ...’ ಎಂದು ತರಗತಿಯ ಉಳಿದ ಟೀಚರುಗಳಿಗೆ ಗ್ರುಪ್–ಮೆಸೇಜ್ ಕೀಲಿಸಿ ಕಳಿಸಿದೆ. ಬಳಿಕ, ‘ಓಕೆ. ಈಗ ಹೇಳು–ವಿಷಯ ಏನೂಂತ... ಬೇಕಿದ್ದರೆ ಕ್ಯಾಂಟೀನಲ್ಲಿ ಕೂರೋಣ...’ ಅಂತಂದೆ. ಸಲಿಲೆ ಇನ್ನಿರದೆ ಹಿಗ್ಗಿಹೋದಳು.

ಸ್ಕೂಲಿನಲ್ಲಿರುವ ‘ಓಗರ’ ಕೆಫೆಯ ಒಂದು ಜನವಿರದ ಮೂಲೆಮೇಜಿನೆದುರು ನಾವಿಬ್ಬರೂ ಎದುರುಬದುರಾಗಿ ಕುಳಿತೆವು. ಯಾವೊತ್ತಿನ ಹಾಗೆ ನನಗೊಂದು ಸಿಂಗಲ್ ಕಾಫಿಯನ್ನೂ, ತನಗೊಂದು ಡಬಲನ್ನೂ ಆದೇಶಿಸಿದ ಸಲಿಲೆ ಮೆಲ್ಲಗೆ ವಿಷಯದ ಕಂತೆ ಬಿಚ್ಚಿದಳು. ‘ಸೀದಾ ಹೇಳಿಬಿಡುತೀನಿ, ಪರಿಧಿ ಸರ್...’ ಎಂದು ಸುರುಗೈದು, ತೀರಾ ಕ್ಲಿನಿಕಲ್ ಆಗಿ ಆಡತೊಡಗಿದಳಾದರೂ, ‘ಶಾಲೆಯಲ್ಲಿ ಒಂದು ಹದಿನೈದು ಹುಡುಗೀರನ ಮೊಲೆಸ್ಟ್ ಮಾಡಲಾಗಿದೆ, ಗೊತ್ತಾ?’ ಎಂದು ನಿಜಸಂಗತಿಗಿಳಿದಿದ್ದೇ ಒನ್ನಮೂನೆ ರಚ್ಚೆಗೀಡಾಗಿಬಿಟ್ಟಳು. ಬಗುಲಿನಲ್ಲೊಂದು ಬಾಂಬು ಸಿಡಿಯಿತೆಂಬಂತೆ ಚಡಪಡಿಕೆ ಮಾಡಿದಳು.

‘ವ್ವಾಟ್ಟ್?’ ನನ್ನೊಳಗೆ ವಜ್ರಾಘಾತವಾಯಿತು.

‘ಯೆಸ್ಸ್, ಪರಿಧಿ ಸರ್... ನಾಲ್ಕು ದಿವಸದ ಹಿಂದೆ ಆರನೇ ಸೆಮಿಸ್ಟರಿನ ಒಂದು ಹುಡುಗಿ ನನ್ನ ಹತ್ತಿರ ಬಂದು ವಿಷಯ ಹೇಳಿಕೊಂಡಳು. ನನ್ನನೇ ಯಾಕಾಯ್ದುಕೊಂಡಳೋ–ಗೊತ್ತಿಲ್ಲ. ಸೀದಾ ನನ್ನ ಕೋಣೆಗೆ ಬಂದು ಹೇಳಿಕೊಂಡು ಅತ್ತಳು. ವಿಪರೀತ ಹಿಂಜರಿಕೆಯಿಂದ ಹೇಳಿಕೊಂಡಳು...’

‘ಯಾರಿದನ್ನು ಮಾಡುತಿರೋದು, ಸಲಿಲಾ?’ ನನ್ನ ಮೈಯೂ ಗಣಬಂದವರಂತೆ ಅದುರತೊಡಗಿತು. ‘ಡ್ಯಾಮಿಟ್ಟ್... ಹೂ ದಿ ಹೆಲ್ಲ್ ಈಸ್ ಇಟ್?’

‘ಯಾರೂನ್ನೋದು ಮುಖ್ಯವಲ್ಲ, ಪರಿಧಿ ಸರ್... ಇದು ನಾನು ಓದಿದ, ನಿಮ್ಮಂಥೋರು ಕಲಿಸಿದ ಈ ಶಾಲೇಲಿ ನಡೆದಿದೆ ಅನ್ನೋದಷ್ಟೇ ಮುಖ್ಯ.’

‘....!!’

‘ಒಂದು ವರ್ಷದಿಂದ ಇದು ನಡೀತಿದೆ, ಪರಿಧಿ ಸರ್... ಮಾಡುತಿರೋನು ಚೆನ್ನಾಗಿ ಪ್ಲ್ಯಾನ್ ಮಾಡಿ ಮಾಡುತಾ ಇದ್ದಾನೆ. ಅಮಾಯಕ ಹುಡುಗೀರನೇ ಆಯ್ದು ಕೆಲಸ ಮಾಡುತಿದಾನೆ.’

‘ಅಯ್ಯೋ ದೇವರೇ... ಯಾರಿದು, ಸಲಿಲಾ?’

‘ಬಿಡಿ, ಪರಿಧಿ ಸರ್...’ ಸಲಿಲೆಯ ಕಣ್ಣುಗಳಲ್ಲಿ ಪಸೆಯೂಡಿ ಬಂದಿತು. ಕ್ರೋಧ, ಹತಾಶೆ, ಅಸಹ್ಯ, ದುಃಖ... ಏನೆಷ್ಟೆಲ್ಲ ರಸಗಳು ಅವಳ ಮೋರೆಯಲ್ಲಿ ಒಟ್ಟೊಟ್ಟಿಗೆ ಘಟಿಸಿ ನೆಲೆಗೊಂಡವು.

‘ಟೆಲ್ಮೀ–ಸಲಿಲಾ... ಯಾರಿದು? ಸ್ಟೂಡೆಂಟಾ? ಪ್ರೊಫೆಸರಾ? ಅಡ್ಮಿನ್ನವನಾ? ಯಾರು ಈ ನನ್ನ ಮಗ?’

‘ಸ್ಟೂಡೆಂಟು–ಪರಿಧಿ ಸರ್... ನಿಮಗೆ ಗೊತ್ತಿರೋನೇ. ನೀವು ಕಲಿಸಿರೋನೇ. ನಿಮ್ಮನ್ನ ವಿಪರೀತ ನೆಚ್ಚಿಕೊಂಡಿರೋನೇ.’

ಅಯ್ಯೋ ದೇವರೇ... ಹೀಗೂ ಉಂಟೇ– ಅಂದುಕೊಂಡೆ. ಯಾರಿರಬಹುದೆಂದು ಕೆಲಗಳಿಗೆ ಯೋಚಿಸಿ ಹೊಳೆಯದಾದೆ. ‘ಸ್ಟೂಡೆಂಟಾ? ಕಾನ್ಟ್ ಬಿಲೀವ್ ದಿಸ್...’ ಎಂದು ಉದ್ಗರಿಸಿ ಆಡಿದೆ.

‘ನಾನೂ ಮೊದಮೊದಲು ನಂಬಲಿಲ್ಲ, ಪರಿಧಿ ಸರ್... ನಂಬೋಕಾಗಲಿಲ್ಲ. ನಿನ್ನೆಯಲ್ಲ ಮೊನ್ನೆ ಏನೋ ನೆಪಮಾಡಿ ಅವನ ಬ್ಯಾಕ್ ಪ್ಯಾಕ್ ತೆಗೆಸಿದೆ. ಕನ್ಫರ್ಮಾಗಿ ಹೋಯಿತು...’

‘ಅಂದರೆ?’

‘ಬ್ಯಾಗೊಳಗೆ ಚೂರಿಯಿಟ್ಟುಕೊಂಡಿರುತಾನೆ– ಪರಿಧಿ ಸರ್...’

‘ಅಂದರೆ?!!’

‘ಕೆಲಸ ಮುಗಿಸಿದ ಮೇಲೆ, ಹುಡುಗಿಗೆ– ಯಾರಿಗಾದರೂ ಹೇಳಿದರೆ ಇದನ ಇರಕೊಂಡು ಸಾಯುತೀನೀಂತ ಹೆದರಿಸುತಾನಂತೆ... ನಿಮ್ಮನ್ನ ಸಾಯಿಸುತೀನೀ ಅನ್ನಲ್ಲ. ತಾನು ಸಾಯುತೀನೀ ಅಂತಾನಂತೆ. ಮೊದಲೇ ಪುಕ್ಕಲು ಹುಡುಗೀರು... ಸಣ್ಣಪುಟ್ಟ ಊರುಗಳಿಂದ ಬಂದೋರು. ಏನು ಮಾಡಿಯಾರು–ನೀವೇ ಹೇಳಿ.’



‘....!!’

‘ಅವನು ಪುಂಡಾಡೋ ಗುಂಡ ಆಗಿದ್ದರೆ ಇದರ ಕರುಮವೇ ಹೀಗೇಂತ ಒದ್ದು ಒಳಗೆ ಹಾಕಿಸಬಹುದಿತ್ತು. ಬಟ್ ದಿಸ್ ಗಯ್ ಈಸ್ ಬ್ರಿಲಿಯಂಟ್... ಎಷ್ಟು ಚೆನ್ನಾಗಿ ಡಿಸೈನು ಮಾಡುತಾನೆ. ಹಿ ಈಸೆನ್ ಅಸೆಟ್ಟ್ ಟು ದಿ ಸ್ಕೂಲ್... ಶಾಲೆಗೆ ಹೆಮ್ಮೆ